CAREERINDIA

| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ]
Total No. of Questions : 54 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 62-K**
**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ
# Subject : Third Language — KANNADA

ದಿನಾಂಕ : 04. 04. 2014 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 04. 04. 2014
[ Time : 9-30 A.M. to 12-15 P.M.
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.careerindia.com

CAREERINDIA



*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಈ ಕೆಳಗೆ ಕೊಟ್ಟಿರುವ ಪದಗಳಲ್ಲಿ ಇದು ಅಂಕಿತನಾಮ

(ಎ) ಅರ್ಚನ (ಬಿ) ವಕೀಲ

(ಸಿ) ಪರ್ವತ (ಡಿ) ಕುರುಡ

*ಉತ್ತರ :* ______________________________



www.careerindia.com

CAREERINDIA



2. ನಾಮಪದದ ಬದಲಾಗಿ ಉಪಯೋಗಿಸುವ ಪದ

(ಎ) ಕ್ರಿಯಾ (ಬಿ) ಸರ್ವನಾಮ

(ಸಿ) ವಿಭಕ್ತಿ (ಡಿ) ವ್ಯಂಜನ

*ಉತ್ತರ :* ______

3. ಕ್ರಿಯಾಪದದ ಮೂಲರೂಪವನ್ನು ಏನೆಂದು ಕರೆಯುತ್ತೇವೆ ?

(ಎ) ನಾಮ ಪ್ರಕೃತಿ (ಬಿ) ವಿಶೇಷಣ

(ಸಿ) ಧಾತು (ಡಿ) ದ್ವಿರುಕ್ತಿ

*ಉತ್ತರ :* ______

4. ಈ ಪದವು ಬಹುವಚನಕ್ಕೆ ಉದಾಹರಣೆಯಾಗಿದೆ

(ಎ) ನಾನು (ಬಿ) ಶಂಕರ

(ಸಿ) ಮರ (ಡಿ) ಅವರು

*ಉತ್ತರ :* ______

5. 'ದೆಹಲಿಯಿಂದ' — ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ

(ಎ) ಯಿಂದ (ಬಿ) ಇಂದ

(ಸಿ) ಅ (ಡಿ) ಎ

*ಉತ್ತರ :* ______

6. ಈ ಪದವು ಆಗಮ ಸಂಧಿಗೆ ಉದಾಹರಣೆಯಾಗಿದೆ

(ಎ) ರಥೋತ್ಸವ (ಬಿ) ಊರೂರು

(ಸಿ) ಮರವನ್ನು (ಡಿ) ಕಂಬನಿ

*ಉತ್ತರ :* ______

www.careerindia.com

CAREERINDIA



7. 'ಮರ್ಯಾದೆ' ಇದರ ವಿರುದ್ಧಾರ್ಥಕ ರೂಪ

(ಎ) ಅಮರ್ಯಾದೆ (ಬಿ) ಆಮರ್ಯಾದೆ

(ಸಿ) ಅವಮರ್ಯಾದೆ (ಡಿ) ಗೌರವ

*ಉತ್ತರ :* ______________________

8. 'ದರ್ಸನ' — ಈ ಪದದ ಶುದ್ಧರೂಪ

(ಎ) ಧರ್ಷನ (ಬಿ) ದರ್ಶನ

(ಸಿ) ದರೂಷನ (ಡಿ) ದರುಶನ

*ಉತ್ತರ :* ______________________

9. ಈ ಕೆಳಗೆ ಕೊಟ್ಟಿರುವ ಪದಗಳಲ್ಲಿ ತದ್ಭವ ಪದ ಯಾವುದು ?

(ಎ) ರಾಜ (ಬಿ) ಪ್ರಾಣ

(ಸಿ) ಧರ್ವ (ಡಿ) ಜನುಮ

*ಉತ್ತರ :* ______________________

10. 'ತರುಣ' ಪದದ ಅನ್ಯಲಿಂಗ ರೂಪ

(ಎ) ತರುಣಿ (ಬಿ) ಧರುಣಿ

(ಸಿ) ತರಣಿ (ಡಿ) ತರಂಗಿಣಿ

*ಉತ್ತರ :* ______________________

11. ಉದಯಗಿರಿಯ ಮೇಲೆ ಮರೆವ ಭಾನುವಿಗೆ ಮತ್ತಿದಿರಾದ ಪ್ರತಿ ಸೂರ್ಯನಂತೆ — ಈ ವಾಕ್ಯದಲ್ಲಿರುವ ಅಲಂಕಾರ ಯಾವುದು ?

(ಎ) ಉಪಮಾ (ಬಿ) ರೂಪಕ

(ಸಿ) ಶ್ಲೇಷ (ಡಿ) ದೃಷ್ಟಾಂತ

*ಉತ್ತರ :* ______________________

www.careerindia.com

CAREERINDIA



12. 'ನಿಂತಾವು' ಪದದ ಗ್ರಾಂಥಿಕ ರೂಪ

(ಎ) ನಿಂತಿವೆ
(ಬಿ) ನಿಲ್ಲುತ್ತವೆ
(ಸಿ) ನಿಲ್ಲುವುದು
(ಡಿ) ನಿಲ್ಲಬಹುದು

ಉತ್ತರ : ______________________

13. 'ಮೂಡಣ' ಪದದ ಸಮಾನಾರ್ಥಕ ಪದ

(ಎ) ಪಶ್ಚಿಮ
(ಬಿ) ದಕ್ಷಿಣ
(ಸಿ) ಉತ್ತರ
(ಡಿ) ಪೂರ್ವ

ಉತ್ತರ : ______________________

14. ಛಂದಶ್ಶಾಸ್ತ್ರದಲ್ಲಿ 'ಗುರು'ವನ್ನು — ಈ ಚಿಹ್ನೆಯಿಂದ ಗುರುತಿಸುತ್ತೇವೆ

(ಎ) +
(ಬಿ) U
(ಸಿ) –
(ಡಿ) =

ಉತ್ತರ : ______________________

15. ಶಂಕರನು ಕನ್ನಡ ಭಾಷೆಯನ್ನು ಕಲಿಯುತ್ತಿದ್ದಾನೆ — ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ ಯಾವುದು ?

(ಎ) ಪೂರ್ಣವಿರಾಮ
(ಬಿ) ಅಲ್ಪವಿರಾಮ
(ಸಿ) ಉದ್ಧರಣ
(ಡಿ) ಪ್ರಶ್ನಾರ್ಥಕ

ಉತ್ತರ : ______________________

www.careerindia.com

CAREERINDIA



16. ಈ ಕೆಳಗಿನ 'ಬ' ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಹೊಂದುವ ಉದಾಹರಣೆಗಳನ್ನು 'ನ' ಪಟ್ಟಿಯ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| *'ಬ' ಪಟ್ಟಿ* | | *'ನ' ಪಟ್ಟಿ* | |
|---|---|---|---|
| i) | ಅನುಕರಣಾವ್ಯಯ | ಅ ) | ಬೀಳದು |
| ii) | ದ್ವಿರುಕ್ತಿ | ಆ ) | ದೇವಾಲಯ |
| iii) | ಜೋಡುನುಡಿ | ಇ ) | ಬೆಹನ್ ಜೀ |
| iv) | ಅನ್ಯದೇಶೀಯ | ಈ ) | ಶಾಲೆಯಲ್ಲಿ |
| v) | ನಿಷೇಧಾರ್ಥಕ ರೂಪ | ಉ ) | ದೀನದಲಿತ |
| | | ಊ ) | ಥಳಥಳ |
| | | ಋ ) | ಕ್ಷಣಕ್ಷಣ |

*ಉತ್ತರಗಳು :* i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ..........................................................................................

18. ಗಿಡವಾಗಿ ಬಗ್ಗದ್ದು ಮರವಾಗಿ .......................................................................................... ?

19. ರಾಮಚಂದ್ರರಾಯರು ಪತ್ನೀ ವಿಯೋಗವನ್ನೂ .......................................................................... ನಿಯಮವೆಂಬಂತೆ ಸಹಿಸಿಕೊಂಡರು.

20. ಎಚ್.ಎಸ್. ವೆಂಕಟೇಶಮೂರ್ತಿಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ದೊರಕಿಸಿ ಕೊಟ್ಟ ಕೃತಿ ................

..........................................................................................................................

21. ಯುಗಾದಿ ಬರುವುದು ನಮಗೆಂದೆ ? ಪದ್ಯವನ್ನು .......................................................................... ಕವನ ಸಂಕಲನದಿಂದ ಆಯ್ದು ಕೊಳ್ಳಲಾಗಿದೆ.



www.careerindia.com

CAREERINDIA



ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $8 \times 1 = 8$

22. ಸೂರ್ಯ ಭರತಕುಮಾರನಿಗೆ ಮಾಡಿದ ಸಹಾಯವೇನು ?

23. ತಗಡೂರು ರಾಮಚಂದ್ರರಾಯರು ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದುದು ಏಕೆ ?

24. ಲಾಲ್‌ಬಾಗ್‌ನ ಗಾಜಿನ ಮನೆ ಯಾವುದರ ಪುನರುತ್ಥಾನವಾಗಿದೆ ?

25. ಪಡಸಾಲೆ ಶಾಸ್ತ್ರಿಯವರಿಗೆ ಯಾವುದಕ್ಕೆ ಆಶ್ರಯ ಸ್ಥಾನವಾಗಿತ್ತು ?

26. ಜನರು ಯಾವುದಕ್ಕೆ ಅಂಜುತ್ತಾರೆಂದು ಈರಣ್ಣ ಇಟಗಿಯವರು ತಿಳಿಸಿದ್ದಾರೆ ?

27. ಸಪ್ತಸಾಗರದ ಮೇಲೆ ಹಡಗನ್ನು ಸೃಷ್ಟಿಸಿ ತೋಲಿ ಬಿಟ್ಟವರು ಯಾರು ?

www.careerindia.com

CAREERINDIA



28. ಭರತೇಶನು ಸಿಂಹಾಸನದ ಮೇಲೆ ಹೇಗೆ ಶೋಭಿಸುತ್ತಿದ್ದನು ?

29. ಸರ್ವೋದಯದ ಸೂತ್ರಧಾರ ಯಾರೆಂದು ತೀ.ನಂ.ಶ್ರೀಕಂಠಯ್ಯನವರು ಹೇಳಿದ್ದಾರೆ ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

30. ಕ್ಷಾಮ ಕಾಲದ ಹಸಿವನ್ನು ನೀಗಿಸಿಕೊಳ್ಳಲು ರಾಮಕೃಷ್ಣ – ಗೌರಿಯ ಕಿವಿಯಲ್ಲಿ ಹೇಳಿದ ಉಪಾಯ ಯಾವುದು ?

www.careerindia.com

CAREERINDIA



31. ಗೌರಿಯು ರಾಣಿ ತಿರುಮಲಾದೇವಿಯ ಬಳಿ ಹೋಗಿ ಏನೆಂದು ಹೇಳಿದಳು ?

32. ಕುದುರೆಯವನು ಕೇದಾರ ಪರ್ವತವನ್ನು ಹತ್ತುವಾಗ ಲೀಲಾವತಿ ಎಸ್. ರಾವ್‌ರವರಿಗೆ ಏನೆಂದು ಸಲಹೆ ಕೊಟ್ಟನು ?

www.careerindia.com

CAREERINDIA



33. ಪಂಚ ಪರ್ವತಗಳು ಎಲ್ಲಿವೆ ? ಅವು ಯಾವುವು ?

34. ಬಿ.ವಿ. ಕಾರಂತರು ಬಾಲ್ಯದಲ್ಲಿ ಮನೆ ಬಿಟ್ಟು ಹೋಗಲು ಕಾರಣವೇನು ?

www.careerindia.com

CAREERINDIA



35. ಬಿ.ವಿ. ಕಾರಂತರಿಗೆ ಬಾಲ್ಯದಲ್ಲಿ ಸಿಕ್ಕ ಕಲಾಶ್ರೀಮಂತಿಕೆ ಎಂಥದ್ದು ?

36. ತಗಡೂರು ರಾಮಚಂದ್ರರಾಯರ ಎರಡು ಮುಖ್ಯ ಕಾರ್ಯಕ್ರಮಗಳು ಯಾವುವು ?

www.careerindia.com

CAREERINDIA



37. ಊರಿನವರು ಶಾಸ್ತ್ರೀಯವರ ಸೊಸೆಯ ಬಗ್ಗೆ ಆಡಿದ ಮಾತುಗಳಾವುವು ?

38. 'ಜೀವನದಿ' ಪದ್ಯದಲ್ಲಿ ಪ್ರಾಚೀನ ಕವಿಗಳನ್ನು ಯಾವ ಹೋಲಿಕೆಯೊಂದಿಗೆ ಪರಿಚಯಿಸಲಾಗಿದೆ ?

www.careerindia.com

CAREERINDIA



39. ತೀ.ನಂ. ಶ್ರೀಕಂಠಯ್ಯನವರು ಗಾಂಧೀಜಿಯನ್ನು 'ಹಿರಿಯ ತಂದೆ' ಎಂದು ಏಕೆ ಕರೆದಿದ್ದಾರೆ ?

40. 'ಶಾರದಾ ಸಖ ಈಶಾ' ಎಂಥವರನ್ನು ಕಂಡು ಬೆರಗಾಗಿದ್ದಾರೆ ?

www.careerindia.com

CAREERINDIA



41. ಶಾಂತಾದೇವಿ ಕೆ. ಸಾಬಾದಿಯವರು 'ದೇಹವನ್ನು ಅಚ್ಚು ಮುರಿದ ಹಾಳು ಬಂಡಿ' ಎಂದು ಹೇಳಲು ಕಾರಣವೇನು ?

42. ಹಿರಿಯರು ಮೊಗಸಾಲೆಯವರಿಗೆ 'ಅನಬೇಡಿ ಇಲ್ಲ' ಎಂದು ಹೇಳಲು ಕಾರಣವೇನು ?

www.careerindia.com

CAREERINDIA



43. ಭರತೇಶನು ಇತರರಿಗಿಂತ ಭಿನ್ನವಾಗಿದ್ದನೆಂಬುದನ್ನು ರತ್ನಾಕರವರ್ಣಿಯು ಹೇಗೆ ವರ್ಣಿಸಿದ್ದಾರೆ ?

44. ಹಿರಿಯರು ಮೊಗಸಾಲೆಯವರನ್ನು ಹೇಗೆ ಸತ್ಕರಿಸಿದರು ?

www.careerindia.com

CAREERINDIA



ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭವನ್ನು ಕೃತಿ, ಕರ್ತೃ ಸಹಿತ ವಿವರಿಸಿ : $4 \times 3 = 12$

45. ''ನನ್ನ ಹೊಗೆಯನ್ನು ಕಳಿಸಿ ಹುಡುಕಿಸಿ ಬಿಡುತ್ತೇನಯ್ಯ ರಾಜಕುಮಾರ ಅಳಬೇಡಪ್ಪ.''

46. 'ಕರ್ನಾಟಕದ ಕೀರ್ತಿಧ್ವಜವನ್ನು ನಭದೆತ್ತರಕ್ಕೆ ಎತ್ತಿ ಹಿಡಿದಿದ್ದಾರೆ.'

www.careerindia.com

CAREERINDIA



47. "ಕನಸ ನನಸಾಗಿಸಿ ಬೆಳಗುವ ದಿನವೆಂದೆ ?"

www.careerindia.com

CAREERINDIA



48. "ಇದು ಬ್ರಹ್ಮಾಂಡ, ನೂರು ಭಾಷೆಗಳ ನವಖಂಡ !"

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 3 = 3

ಕಾಲನ ದೂತರು __________

__________

__________

__________ ಸಿಕ್ಕಲು ಬೇಡ ॥

**ಅಥವಾ**

www.careerindia.com

CAREERINDIA



ಸುಳಿ ಮಿಂಚಿನ ____________________

____________________

____________________

____________________ರತ್ನಾಕರನ ಕೆರೆ ॥

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಪೂರ್ಣಿಮಾ, ಲಕ್ಷ್ಮಣೆಗೆಯ ಜನ್ಮರಹಸ್ಯವನ್ನು ಹೇಗೆ ಕಂಡುಕೊಂಡಳು ?

— ವರ್ಷದಿಂದ ವರ್ಷಕ್ಕೆ ಜಲಮಟ್ಟ ಕುಸಿಯಲು ಕಾರಣಗಳಾವುವು ?

— ಭರತಕುಮಾರ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ತನ್ನ ತಾಯಿಯನ್ನು ಹೇಗೆ ಕಂಡುಕೊಂಡನು ?

50.

www.careerindia.com

CAREERINDIA



51.

52. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಭಾಗ್ಯದ ಬಳೆಗಾರ ಪದ್ಯದಲ್ಲಿ ಬಾಲೆ ಮತ್ತು ಬಳೆಗಾರನ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

— ಶಾಂತದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ?

www.careerindia.com

CAREERINDIA



53. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಅರಣ್ಯ ನಾಶಗೊಳ್ಳಲು ಕಾರಣಗಳೇನು ?

— ದಿನಪತ್ರಿಕೆಗಳು

— ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ಸೂಕ್ತವೇ ?

www.careerindia.com

CAREERINDIA



www.careerindia.com

CAREERINDIA



54. — ನೀವು ಬೆಂಗಳೂರಿನ ಅಶ್ವತ್ಥನಗರ ನಿವಾಸಿ ಅಂಬಿ / ಸಾಯಿಕೃಪ ಎಂದು ಭಾವಿಸಿ, ಎಸ್.ಎಸ್.ಎಲ್.ಸಿ.ಯ ನಂತರ ನಿಮ್ಮ ಜೀವನದ ಗುರಿ ಏನೆಂಬುದನ್ನು ತಿಳಿಸುತ್ತ ಉಡುಪಿಯಲ್ಲಿರುವ ನಿಮ್ಮ ಗೆಳೆಯ / ಗೆಳತಿ ಚಂದ್ರಶೇಖರ ಅಡಿಗ / ಸುಕನ್ಯಳಿಗೊಂದು ಪತ್ರ ಬರೆಯಿರಿ. $1 \times 5 = 5$

***ಅಥವಾ***

— ನೀವು ಮೈಸೂರಿನ ಕುರಬರ ಹಳ್ಳಿಯ ನಿವಾಸಿ ಅಶ್ವಿನ್ / ಗೀತಾಂಜಲಿ ಎಂದು ಭಾವಿಸಿ, ನಿಮ್ಮ ಬಡಾವಣೆಯ ರಸ್ತೆಗಳನ್ನು ದುರಸ್ತಿಗೊಳಿಸುವಂತೆ ತಿಳಿಸಿ ಮೈಸೂರಿನ ಮಹಾಪೌರರಿಗೆ ಒಂದು ಪತ್ರ ಬರೆಯಿರಿ.

www.careerindia.com

www.careerindia.com